ಕರ್ನಾಟಕ ವಿಧಾನ ಪರಿಷತ್

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1031
2) ಸದಸ್ಯರ ಹೆಸರು : ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3) ಉತ್ತರಿಸಬೇಕಾದ ದಿನಾಂಕ: : 22.12.2021
4) ಉತ್ತರಿಸುವವರು : ಮಾನ್ಯ ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಕಲಬುರಗಿ ರೈಲ್ವೆ ವಲಯ ಸ್ಥಾಪನೆಯ ಬಗ್ಗೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆಯೆ; (ವಿವರ ನೀಡುವುದು)	ಕಲಬುರಗಿ ರೈಲ್ವೆ ವಲಯ ಸ್ಥಾಪನೆಯ ಕುರಿತು ಮಾನ್ಯ ಮುಖ್ಯಮಂತ್ರಿಗಳಿಂದ ಪತ್ರ ಸಂಖ್ಯೆ:CM/296/GOI/2020, ದಿನಾಂಕ: 26.08.2021ರಲ್ಲಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು.
ಆ)	ಕಲಬುರಗಿ ರೈಲ್ವೆ ವಲಯ ಸ್ಥಾಪನೆಗೆ ಸಂಬಂಧಿಸಿದಂತೆ, ರಾಜ್ಯ ಸರ್ಕಾರದ ಪ್ರಸ್ತಾವನೆಗೆ ಕೇಂದ್ರದಿಂದ ಬಂದ ಉತ್ತರವೇನು: (ಸಂಪೂರ್ಣ ವಿವರ ನೀಡುವುದು)	ಮಾನ್ಯ ಕೇಂದ್ರ ರೈಲ್ವೆ ಮಂತ್ರಿಗಳಿಂದ ಸ್ವೀಕೃತವಾಗಿರುವ ಈ ಕೆಳಕಂಡ ಪತ್ರಗಳನ್ನುಅನುಬಂಧದಲ್ಲಿ ಲಗತ್ತಿಸಿದೆ. 1. ಸಂಖ್ಯೆ:2018/E&R/1(2) /12, ದಿನಾಂಕ: 29.12.2020- ಅನುಬಂಧ-1. 2. ಸಂಖ್ಯೆ:2020/E&R/1(3) /1, ದಿನಾಂಕ: 04.02.2021- ಅನುಬಂಧ-2. ಈ ವಿಷಯವನ್ನು ರೈಲ್ವೆ ಮಂತ್ರಾಲಯವು ಪರಿಶೀಲಿಸಿದ್ದು, ಕಾರ್ಯನಿರ್ವಹಣೆ, ಆಡಳಿತಾತ್ಮಕ ಮತ್ತು ಆರ್ಥಿಕ ಕಾರಣಗಳಿಗಾಗಿ ಗುಲ್ಬರ್ಗಾ ವಿಭಾಗದ ಸ್ಥಾಪನೆಯು ಕಾರ್ಯಸಾಧುವಲ್ಲ ಎಂದು ಹಿರಿಯ ರೈಲ್ವೆ ಅಧಿಕಾರಿಗಳ ಸಮಿತಿ ಅಭಿಪ್ರಾಯ ನೀಡಿದ್ದು, ಸದರಿ ಅಭಿಪ್ರಾಯವನ್ನು ರೈಲ್ವೆ ಮಂತ್ರಾಲಯವು ಒಪ್ಪಿರುತ್ತದೆ ಎಂದು ತಿಳಿಸಿರುತ್ತಾರೆ.
ಇ)	ಕಲಬುರಗಿ ರೈಲ್ವೆ ವಲಯ ಸ್ಥಾಪನೆಗೆ ಬೇಕಾಗುವ ಅನುದಾನ ಎಷ್ಟು; ಇದರಲ್ಲಿ ರಾಜ್ಯ ಸರ್ಕಾರದ ಪಾಲೆಷ್ಟು; ಹಾಗೂ ಕೇಂದ್ರ ಸರ್ಕಾರದ ಪಾಲೆಷ್ಟು? (ವಿವರ ನೀಡುವುದು)	ಉದ್ಭವಿಸುವುದಿಲ್ಲ

ಸಂಖ್ಯೆ: ಮೂಅಇ 244 ರಾರಾಹೆ 2021

(ವಿ.ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು